‘ಪರೀಕ್ಷೆಗೆ ಓದೋದಿಕ್ಕೆ ಬಹಳ ಇದ್ಯಪ್ಪ. ಈಗ ಬೇಡಾ. ಹೇಳಿದ್ ಕೇಳಪ್ಪ.’ ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

‘ಥೂ, ಹುಡಿಗೀರ್ ತರಾ ಅಳ್ತೀಯಲ್ಲೋ. ಗಂಡ್ಸುಡುಗಾ ತಾನೇ ನೀನು? ಎಲ್ಲಾದ್ರೂ ಹೋಗ್ಬೇಕಂದ್ರೆ ಸೈಕಲ್ ಓಡ್ಸೋಕ್ಕೆ ಗೊತ್ತಿರ್ಬೇಕಲ್ವೆ? ನೀನೇ ಕೋಳಿ ಕೊಳ್ಳಬೇಕಂದರೆ ಊರೂರಿಗೆ ನಡದೇ ಹೋಗ್ತೀಯೇನು?’

‘ಕೋಳಿ ಯಾಪಾರಾನೇ ನನಗೆ ಬೇಡಪ್ಪ.’

‘ಯಾಪಾರಾ ಮಾಡ್ದೆ ಇನ್ನೇನ್ ಕಲೆಕ್ಟರ್ ಕೆಲ್ಸಕ್ಕೆ ಹೋಗ್ತೀಯೇನು?’

‘ಇಲ್ಲಾಪ್ಪ.’

‘ಇಲ್ಲಾಪ್ಪಾನೂ ಇಲ್ಲ ಗಿಲ್ಲಪ್ಪಾನೂ ಇಲ್ಲಾ...’ ಅವರ ದನಿ ಜೋರಾಯಿತು.

‘ಬೇಡಪ್ಪ, ಬೇಡಾಪ್ಪಾ’ ಅಂತ ಅವನು ಗೆಂಜಿದ ದನಿ ಅವರ ಕಿವಿಗೆ ಬೀಳಲೇ ಇಲ್ಲ. ‘ಸೀಟಿನ ಮೇಲೆ ಕೂರೋ’ ಅಂತ ಅವನ ಬೆನ್ನಿನ ಮೇಲೆ ಹೊಡೆದರು. ಬೇರೆ ದಾರಿ ಕಾಣದೆ ಅವನು ಸೈಕಲ್ ಸೀಟಿನಲ್ಲಿ ಕುಳಿತ. ಡೊಂಕು ಬಿದ್ದ ಪಾತ್ರೆಯನ್ನು ತಟ್ಟಿ ಸರಿಮಾಡುವಂತೆ ಅಪ್ಪ ಅವನ ಬೆನ್ನ ಮೇಲೆ ಹೊಡೆದರು. ಚಟ್ಟಂತ ಅವನ ಬೆನ್ನು ಸೆಟೆದುಕೊಳ್ಳಲು, ಒಂದು ಬಂಡೆಯನ್ನು ಬೆನ್ನಿಗೆ ಕಟ್ಟಿದಂತೆ ಬಾಸವಾಯಿತು.

‘ನೆಟ್ಟಗೆ ನೋಡೋ. ತಲೆ ತಗ್ಗಿಸದೆ ಪೆಡಲ್ ತುಳಿ’ ಎನ್ನುತ್ತಲೇ ಹಿಂದೆ ಹಿಡಿದುಕೊಂಡೇ ಸೈಕಲ್ಲನ್ನು ನೂಕಿದರು. ಮರುಕ್ಷಣವೇ  ಅವನ ತೋಳು ಒಂದು ಪಕ್ಕಕ್ಕೆ ಬಾಗತೊಡಗಿತು. ‘ತೋಳನ್ನ ಬಾಗಿಸಬೇಡ’ ಎಂದು ಒತ್ತಿ ಹೇಳುತ್ತಲೇ ಅವರು ಆಸರೆಕೊಟ್ಟು ನೆಟ್ಟಗೆ ನಿಲ್ಲಿಸಿದರು. ಸಂಬಾಳಿಸಿಕೊಂಡು ಸರಿಯಾದ ಸ್ಥಿತಿಗೆ ಬರುವಾಗ ಗಾಡಿ ನಿಂತುಹೋಯಿತು. ಮತ್ತೆ ಪೆಡಲನ್ನು ತುಳಿದು ಸೈಕಲನ್ನು ಓಡಿಸಿದಾಗ, ಮತ್ತೊಂದು ಪಕ್ಕಕ್ಕೆ ಮೈ ವಾಲಿತು. ಪೆಡಲಿಗೂ ದೇಹಕ್ಕೂ ಸಮಸ್ಥಿತಿ ಕೂಡಿಬರಲೇ ಇಲ್ಲ. ಅಪ್ಪನ ಹಿಡಿತವನ್ನು ಮೀರಿ ಕೆಳಗೆ ಬಿದ್ದ. ಎಡ ತೋಳಿಗೆ ಪೆಟ್ಟು ಬಿದ್ದು ತೋಳ ಬಳಿ ಅಂಗಿ ಹರಿದುಹೋಯಿತು. ಕಣಕಾಲಿನ ಚರ್ಮ ಕಿತ್ತುಹೋಯಿತು. ಕಣ್ಣುಗಳಲ್ಲಿ ನೀರು ತುಂಬಿಕೊಳ್ಳಲು ‘ಅಪ್ಪ ಬೇಡಪ್ಪ’ ಎಂದ. ಅಪ್ಪ ಕಿವಿಗೆ ಹಾಕಿಕೊಳ್ಳಲಿಲ್ಲ.

‘ಎದ್ದು ಬಾರೋ, ಸೈಕಲ್ ಕಲಿಯೋವಾಗ ಇವೆಲ್ಲ ಸಹಜ ಕಣೋ. ಚಿಕ್ಕ ವಯಸ್ಸಲ್ಲಿ ನನ್ನ ಮೈ ಪೂರ್ತಿ ಗಾಯಾನೇ ಗೊತ್ತಾ?’

ಅವರು ಮತ್ತೆ ಅವನನ್ನು ಸೈಕಲ್ಲಿನಲ್ಲಿ ಕೂರಿಸಿ ಕಲಿಸುವ ಪ್ರಯತ್ನಗಳಿಗೆ ಮುಂದಾದರು. ಅವರ ಸುತ್ತ ಒಂದು ಗುಂಪೇ ನಿಂತು ತಮಾಷೆ ನೋಡಿತು. ಅವಮಾನದಿಂದ ಅವನು ತಲೆ ಎತ್ತಿ ನೋಡಲಾಗಲಿಲ್ಲ. ಹೆಚ್ಚುಕಡಿಮೆ ಒಂದು ಗಂಟೆ ಕಾಲ. ಹಣೆ, ಕೈ, ಕಾಲುಗಳಲ್ಲಿ ಗಾಯಗಳಾದದ್ದೇ ಬಂತು. ಮೊದಲೇ ಇದ್ದ ಗಾಯಗಳು ದೊಡ್ಡದಾಗಿ ರಕ್ತ ಸೋರುತ್ತಿತ್ತು. ಮಣ್ಣಲ್ಲಿ ಬಿದ್ದು ಎದ್ದು ಮೈತುಂಬ ದೂಳು ಅಂಟಿಕೊಂಡಿತ್ತು. ಒಂದು ಹತ್ತು ಅಡಿ ಸಹ ಅವನಿಗೆ ಸ್ವತಂತ್ರವಾಗಿ ಸೈಕಲ್ ಓಡಿಸಲು ಬರಲಿಲ್ಲ. ‘ಸರಿ, ಸಾಕು ಬಿಡು. ಮುಂದಿನ್ವಾರ ನೋಡ್ಕೊಳ್ಳೋಣ’ ಎಂದು ಬೇಸರದಿಂದ ಕಲಿಸುವುದನ್ನು ನಿಲ್ಲಿಸಿಬಿಟ್ಟರು. ‘ನೀನು ನನ್ನ ಹತ್ರ ಸರಿಯಾಗಿ ಕಲಿಯಲ್ಲ. ನಮ್ಮ ಅಬ್ದುಲ್ಲಾ ಹತ್ರ ಹೇಳ್ತೀನಿ. ಅವನು ನಾಲ್ಕು ದಿನದಲ್ಲಿ ನಿನಗೆ ಹೇಳ್ಕೊಡ್ತಾನೆ’ ಎಂದು ಗೊಣಗಿದರು.

ದಣಿವಿನಿಂದ ಸೈಕಲನ್ನು ಮನೆಯಕಡೆಗೆ ನೂಕುತ್ತ ನಡೆಯುತ್ತಿರುವಾಗ ‘ನಿಲ್ಲೋ’ ಎಂದು ಅಪ್ಪ ಮತ್ತೆ ಗದರಿಸಿದರು. ಅಭ್ಯಾಸದಂತೆ ಮತ್ತೆ ಆರೇಳು ಅಡಿ ಮುಂದಕ್ಕೆ ಹೋಗಿಯೇ